

# ‘ವೀಣೆ ಸಾರ್ವಭೌಮ’ನಿಗೆ ಶತ ನಮನ!

## ದೊರೆಸ್ವಾಮಿ ಅಯ್ಯಂಗಾರ್ ಜನ್ಮಶತಮಾನೋತ್ಸವ

**ಮೈಸೂರು ‘ಬಾನಿ’ಯಲ್ಲಿ ವೀಣೆ ನುಡಿಸುತ್ತಿದ್ದ ವಿದ್ವಾನ್ ದೊರೆಸ್ವಾಮಿ ಅಯ್ಯಂಗಾರ್ ಪರಂಪರೆಯ ವಾದ್ಯ ಸಂಗೀತದಲ್ಲಿ ಬಹುದೊಡ್ಡ ಹೆಸರಾಗಿದ್ದು, ‘ವೀಣೆ ಸಾರ್ವಭೌಮ’ ಎನಿಸಿಕೊಂಡವರು. ಇಂಥ ಮಹಾನ್ ವೀಣಾ ವಾದಕರ ಜನ್ಮಶತಮಾನೋತ್ಸವವನ್ನು ಈ ವರ್ಷಪೂರ್ತಿ ಆಚರಿಸಲಾಗುತ್ತಿದೆ.**

■ ಉಮಾ ಅನಂತ್

ಕರ್ನಾಟಕ ಶಾಸ್ತ್ರೀಯ ವಾದ್ಯ ಸಂಗೀತದ ವೀಣೆಯಲ್ಲಿ ವಿದ್ವಾನ್ ದೊರೆಸ್ವಾಮಿ ಅಯ್ಯಂಗಾರ್ ಅವರದು ಬಹುದೊಡ್ಡ ಹೆಸರು. 20ನೇ ಶತಮಾನದಲ್ಲಿ ವೀಣೆಯ ಘನ ವಿದ್ವಾಂಸರಾಗಿದ್ದ ದೊರೆಸ್ವಾಮಿ ಅಯ್ಯಂಗಾರ್ ಮೈಸೂರು ಬಾನಿಯಲ್ಲಿ ವೀಣೆ ನುಡಿಸುವ ಪ್ರಖ್ಯಾತ ಕಲಾವಿದರಾಗಿದ್ದು, ವೀಣಾ ವಾದನಕ್ಕೆ ಅನ್ವರ್ಥನಾಮವಾಗಿ ಬೆಳೆದವರು. ಹೀಗಾಗಿ ಇವರ ಹೆಸರಿನ ಜತೆಗೆ ‘ವೀಣೆ’ ಪದವೂ ಸೇರಿಕೊಂಡು ಜಗದ್ವಿಖ್ಯಾತರಾದ ಜೊತೆಗೆ ‘ವೀಣೆ ಸಾರ್ವಭೌಮ’ ಎಂದೂ ಹೆಸರಾದರು.

1920ರಲ್ಲಿ (ಅಕ್ಟೋಬರ್ 24, 1920) ಹುಟ್ಟಿದ ದೊರೆಸ್ವಾಮಿ ಅಯ್ಯಂಗಾರ್ ಅವರ ಜನ್ಮಶತಮಾನೋತ್ಸವವನ್ನು ಈ ವರ್ಷ ವಿಶಿಷ್ಟವಾಗಿ ಆಚರಿಸಲಾಗುತ್ತಿದೆ.

ತಮ್ಮ ತಂದೆ ವೆಂಕಟೇಶ್ ಅಯ್ಯಂಗಾರ್ ಅವರ ಬಳಿ ಸಂಗೀತ ಹಾಗೂ ವೀಣೆಯ ಆರಂಭಿಕ ಅಭ್ಯಾಸ ಮಾಡಿದ ದೊರೆಸ್ವಾಮಿ ಅಯ್ಯಂಗಾರ್, ಮುಂದೆ ವೀಣೆ ವೆಂಕಟಗಿರಿಯಪ್ಪ ಅವರ ಬಳಿ ಮೈಸೂರು ಬಾನಿಯಲ್ಲಿ ವೀಣೆ ನುಡಿಸಲಾರಂಭಿಸಿದರು. ಮೈಸೂರು ಮಹಾರಾಜರ ಮುಂದೆ ಅರಮನೆಯ ಸಂಗೀತ ವೇದಿಕೆಯಲ್ಲಿ ತಮ್ಮ 12ನೇ ವಯಸ್ಸಿಗೇ ಮೊದಲ ಕಛೇರಿ ನೀಡಿ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರಿಂದ ಶಹಬ್ಬಾಸ್ ಎನಿಸಿಕೊಂಡವರು. ಮುಂದೆ ಅರಮನೆಯ ವಾದ್ಯಗೋಷ್ಠಿಗೆ ಸೇರ್ಪಡೆಗೊಂಡು ತಮ್ಮ ತಂದೆ ಹಾಗೂ ಗುರುಗಳಂತೆ ಆಸ್ಥಾನ ವಿದ್ವಾಂಸರೂ ಆದರು.

### ಸ್ಮರಣಾರ್ಹ ಕಛೇರಿ

ಬೆಂಗಳೂರು ಗಾಯನ ಸಮಾಜದಲ್ಲಿ 1943ರಲ್ಲಿ ಅವರು ನೀಡಿದ ವೀಣೆ ಕಛೇರಿ